# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/51/15-16

ದಿನಾಂಕ :16-09-2016

ಉಪಸ್ಥಿತರು: **ಶ್ರೀ ಲೋಕೇಶ್ ಪಿ.ಎನ್** (ಕ.ಆ.ಸೇ)

**ಸಹಾಯಕ ಆಯುಕ್ತರು, ಬಳ್ಳಾರಿ.**

| ವಾದಿಗಳು | ಪ್ರತಿವಾದಿಗಳು |
|---|---|
| 1. ಶ್ರೀ ಗೋಪಾಲ @ ಗೋಪಾಲಪ್ಪ ತಂದೆ ಲೇಟ್ ಸೋಮಪ್ಪ, ಸಾ\|\|ವೇಣಿವೀರಾಪುರ ಗ್ರಾಮ<br>2. ಶ್ರೀಮತಿ ಲಕ್ಷ್ಮಿ ದೇವಿ ಗಂಡ ಲೇಟ್ ಹುಲುಗಪ್ಪ<br>3. ಶ್ರೀ ಕುಮಾರಸ್ವಾಮಿ ತಂದೆ ಲೇಟ್ ಹುಲುಗಪ್ಪ<br>4. ಶ್ರೀ ಮುನಿಸ್ವಾಮಿ ತಂದೆ ಲೇಟ್ ಹುಲುಗಪ್ಪ<br>5. ಶ್ರೀಮತಿ ಹೇಮಲತ ಗಂಡ ಲೇಟ್ ಹುಲುಗಪ್ಪ<br>6. ಶ್ರೀ ಹೊನ್ನೂರಸ್ವಾಮಿ ತಂದೆ ಲೇಟ್ ಹುಲುಗಪ್ಪ<br>7. ಶ್ರೀಮತಿ ಸೊಮಕ್ಕ ಗಂಡ ಲೇಟ್ ಹುಲುಗಪ್ಪ<br>8. ಕುಮಾರಿ ಮುನಿಯಮ್ಮ ತಂದೆ ಲೇಟ್ ಹುಲುಗಪ್ಪ<br>ಸಾ\|\|ವೇಣಿ ವೀರಾಪುರ ಗ್ರಾಮ, ತಾ\|\|ಬಳ್ಳಾರಿ<br>**(ಶ್ರೀ ಎಂ ಲೋಕೇಶ್ ಹಾಗೂ ಎಸ್ ಅನಂತ ಪ್ರಸಾದ್, ವಕೀಲರುಗಳು, ಬಳ್ಳಾರಿ)** | 1. ಉಪ ತಹಶೀಲ್ದಾರರು, ಕುರುಗೋಡು<br>2. ಶ್ರೀ ದೊಡ್ಡನಗೌಡ ತಂದೆ ಲೇಟ್ ವೀರನಗೌಡ, ಸಾ\|\|ವೇಣಿವೀರಾಪುರ ಗ್ರಾಮ, ತಾ\|\|ಬಳ್ಳಾರಿ |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಬಳ್ಳಾರಿ | ವೇಣಿವೀರಾಪುರ | 379 & 381 | 5.51 ಹಾಗೂ 1.28 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು, ಕುರುಗೋಡು ಇವರ ಎಂ.ಆರ್ ನಂ 06/1995-96 ದಿನಾಂಕ: 18-09-1995 ಹಾಗೂ ಎಂ.ಆರ್ ನಂ 10/1995-96 ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಠಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 18-12-2015, 04-03-2016, 01-04-2016 ಮತ್ತು 16-09-2016 ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳ ಪರ ವಕೀಲರು ದಿನಾಂಕ: 16-09-2016 ರಂದು ಈ ನ್ಯಾಯಾಲಯಕ್ಕೆ ಹಾಜರಾಗಿ, ಬಳ್ಳಾರಿ ತಾಲ್ಲೂಕಿನ ವೇಣಿವೀರಾಪುರ ಗ್ರಾಮದ ಸ.ನಂ 379 & 381 ವಿಸ್ತೀರ್ಣ: 5.51 ಹಾಗೂ 1.28 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಕುರುಗೋಡು ಇವರ ಎಂ.ಆರ್ ನಂ 06/1995-96 ದಿನಾಂಕ: 18-09-1995 ಹಾಗೂ ಎಂ.ಆರ್ ನಂ 10/1995-96 ಗಳನ್ನು ರದ್ದು ಪಡಿಸಿ, ನೊಂದಾಯಿತ ಕ್ರಯ ಪತ್ರ ಸಂಖ್ಯೆ 615/95-96 ದಿನಾಂಕ